**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 25-05-2026 ರಂದು ಪ್ರಮಾಣ ಮಾಡಿಸಲಾಯಿತು**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ ಬಿ ಎಸ್ ವಕೀಲರಿಂದಃ**

ನಾನು, ಪ್ರಾಸಾ-3 ರಿಂದ 5, 7 ರಿಂದ 10 ರವರು ಒಂದೆ ಸಮಾಜದವರು ಅಂದರೆ ನಿಜ. ಜಗಳದ ಬಗ್ಗೆ ನನಗೆ ವಯಕ್ತಿಕವಾಗಿ ಗೊತ್ತಿಲ್ಲ. ನಾನು ಪೋಲೀಸ ಠಾಣೆಗೆ ಭೇಟಿ ನೀಡಿಲ್ಲ ಹಾಗೂ ಹೇಳಿಕೆ ನೀಡಿಲ್ಲ. ಜಗಳ ಆದ ಸಮಯದಲ್ಲಿ ಸಾಕಷ್ಟು ಜನರು ಸ್ಥಳದಲ್ಲಿ ಸೇರಿದ್ದರು ಅಂದರೆ ನಿಜ. ಸ್ಥಳದಲ್ಲಿ ಸಾಕಷ್ಟು ಜನ ಸೇರಿದ್ದರಿಂದ ಯಾರು ಯಾರ ಮೇಲೆ ಹಲ್ಲೆ ಮಾಡಿದರು ಎಂದು ಗೊತ್ತಾಗುವುದಿಲ್ಲ ಅಂದರೆ ನಿಜ. ಜಗಳದ ಸಮಯದಲ್ಲಿ ಯಾವ ಆರೋಪಿ ಹತ್ತಿರ ಯಾವ ಆಯುಧ ಇತ್ತು ಎಂದು ಹೇಳಲು ಬರುವುದಿಲ್ಲ. ಯಾವ ಆರೋಪಿ ಯಾರ ಮೇಲೆ ಹಲ್ಲೆ ಮಾಡಿದ ಎಂದು ಹೇಳಲು ಬರುವುದಿಲ್ಲ. ಜಗಳದಲ್ಲಿ ಯಾರು ಯಾರಿಗೆ ಪೆಟ್ಟಾಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಜಗಳದಲ್ಲಿ ನನಗೆ ಯಾವುದೆ ರೀತಿಯ ಗಾಯ ಆಗಿರುವುದಿಲ್ಲ. 1 ಮತ್ತು 2 ನೇ ಆರೋಪಿತರು ಚಾಸಾ-1 ರವರ ಸೀರಿ ಹಿಡಿದು ಎಳೆದಾಡಿರುವುದು ನನಗೆ ಗೊತ್ತಿಲ್ಲ. ಜಗಳದ ಸಮಯದಲ್ಲಿ ಯಾರು ಯಾರಿಗೆ ಏನು ಬೈದರು ಎಂದು ಹಾಗೂ ಯಾರಿಗೆ ಗಾಯಗಳು ಆಗಿವೆ ಎನ್ನುವದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಬಡಿಗೆಗಳನ್ನು ನಾನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡಿದ್ದೇನೆ ಅಂದರೆ ನಿಜ ಬೇರೆ ಎಲ್ಲಿಯೂ ನೋಡಿಲ್ಲ. ಮುದ್ದೆಮಾಲಿನಂತಹ ಬಡಿಗೆಗಳು ಎಲ್ಲಾ ಕಡೆಗೆ ಸಿಗುತ್ತವೆ. ಜಗಳದಲ್ಲಿ ಯಾರಿಗೆ ಏನು ಆಯಿತು ಎಂದು ಹೇಳಲು ಬರುವುದಿಲ್ಲ.

ಮೊದಲಿನಿಂದ ಆರೋಪಿತರು ಹಾಗೂ ನಮ್ಮ ಕುಟುಂಬದ ಮಧ್ಯ ವೈಮನಸ್ಸು ಇರುತ್ತದೆ ಅಂದರೆ ನಿಜ. ಆರೋಪಿತರ ವಿರುದ್ಧ ಹಿಂದಿನ ದ್ವೇಷದಿಂದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**